**ಸಾಕ್ಷಿಯನ್ನು ದಿಃ 04.11.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದ ಸಂಗತಿಗಳು ಎಲ್ಲಾ ಸತ್ಯವಾಗಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ** ಎದುರುದಾರರ ಪರ ಡಿಜಿಪಿ ವಕೀಲರಿಂದಃ

1. ಪಿಳ್ಳಹಳ್ಳಿ ಗ್ರಾಮದ ಸರ್ವೆ ನಂಬರ್ 21 ರಲ್ಲಿ 0.25 ಗುಂಟೆ ಜಮೀನು ಭೂ ಸ್ವಾಧೀನವಾಗಿದೆ. ಸ್ವಾಧೀನವಾದ ಈ 0.25 ಗುಂಟೆ ಜಮೀನಿಗೆ ನಾನು ಪರಿಹಾರದ ಹಣವನ್ನು ಪಡೆದುಕೊಂಡಿರುತ್ತೇನೆ. ಅವತ್ತಿನ ಕಾಲಕ್ಕೆ ಅ ಪರಿಹಾರದ ಹಣ ಕಾನೂನುಬದ್ದವಾಗಿತ್ತು ಎಂದರೆ ಸರಿಯಲ್ಲ.

2. ಹೆಚ್ಚಿನ ಪರಿಹಾರಕ್ಕಾಗಿ ನಾನು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಕೇಸನ್ನು ಹಾಕಿದ್ದೆನು. ಅ ಕೇಸಿನಲ್ಲಿ ಹೆಚ್ಚಿನ ಪರಿಹಾರಕ್ಕೆ ಆದೇಶವಾಗಿರುತ್ತದೆ. ಅ ಪರಿಹಾರವನ್ನು ಜಾರಿ ಕೇಸು ಹಾಕಿ ನಾನು ಪಡೆದುಕೊಂಡಿರುತ್ತೇನೆ.

3. ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳ ಬಗ್ಗೆ ಮಾಹಿತಿ ಇಲ್ಲ.

4. 6195 ದಿನಗಳ ತಡವಾಗಿ ಅಪೀಲನ್ನು ಸಲ್ಲಿಸಿರುವುದಕ್ಕೆ ಸಕಾರಣಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು